Regd No. M. 1299 SATYAVADI Founded 1917

ಸತ್ಯವಾದಿ

(ಅರಮನೆ ಸಿರಸ್ತೇದಾರ್ ಎಂ. ವಿ. ಸುಬ್ಬರಾಯರಿಂದ ಸ್ಥಾಪಿಸಲ್ಪಟ್ಟುದು)

ಸಂಪುಟ 30 ಸಂಚಿಕೆ 117] ಬುಧವಾರ 8—1—47 [ಬಿಡಿ ಪ್ರತಿ 3 ಪೈ

ಮೈಸೂರು ಸಂಸ್ಥಾನದ ಆಹಾರ ಪರಿಸ್ಥಿತಿ

ಬೆಂಗಳೂರು ಜ 7— 'ಮೈಸೂರು ಸಂಸ್ಥಾನದ ಆಹಾರ ಪರಿಸ್ಥಿತಿಯಲ್ಲಿ 1946 ನೆ ಡಿಸೆಂಬರ 15ಕ್ಕೆ ಆಗುವ ಪಕ್ಷದಲ್ಲಿ ಯಾವ ಬದಲಾವಣೆಯೂ ಕಂಡು ಬಂದಿಲ್ಲ. ಈ ಹದಿನೈದು ದಿವಸಗಳಲ್ಲಿ ಅತಿ ವೃಷ್ಟಿಯಾಯಿತು. ಅನೇಕ ಪ್ರದೇಶಗಳಿಗೆ ಈ ವೃಷ್ಟಿ ಅಕಾಲವಾದುದು. ಅಪಾಕೃತವಾದ ಈ ವೃಷ್ಟಿಯ ದೆಸೆಯಿಂದ ಫಸಲು ತೊಂದರೆಗೊಳಗಾಗಿದೆಯೆಂದು ವಂದಿಯಾಗಿದೆ' ಎಂಬುದಾಗಿ ಸರ್ಕಾರಿಂದ ಪ್ರಕಟನಾಧಿಕಾರಿಗಳು ಪತ್ರಿಕಾ ಪ್ರಕಟಣೆ ಪ್ರಸಿದ್ಧಿಸಿದ್ದಾರೆ.

'ಚಿತ್ರದುರ್ಗದಲ್ಲಿ ಏರ್ಪಡಿಸಿದ್ದ ಉಚಿತ ಭೋಜನಶಾಲೆಗಳನ್ನು ಮುಚ್ಚಲಾಗಿದೆ. ಒಂದೇ ಒಂದು ಉಚಿತ ಭೋಜನಶಾಲೆಯು ಚಳ್ಳಕೆರೆಯಲ್ಲಿದೆ. ಅಭಾವಕ್ಕೊಳಗಾದ ತಾಲ್ಲೂಕುಗಳಲ್ಲಿ ಶಾಲಾ ಮಕ್ಕಳಿಗೆ ಮತ್ತು ರೋಗಿಗಳಿಗೆ ಹಾಲು ಹಂಚುವುದು ಉತ್ತಮವಾಗಿದೆ' ಎಂದು ಅದೇ ಪ್ರಕಟಣೆ ತಿಳಿಸುತ್ತದೆ.

'13 ಪ್ರಮುಖ ನಗರ ಮತ್ತು ಪಟ್ಟಣಗಳಲ್ಲಿ ಪಡಿಭತ್ಯ ಶಾಸನ ಸುಮುಖವಾಗಿ ನಡೆಯುತ್ತಿದೆ. ಆಹಾರ ದಾಸ್ತಾನು ನಿಮಿತ್ತ ಆವಶ್ಯವಾದಷ್ಟು ಕಾಳು ಸಂಗ್ರಹ ಮಳಿಗೆಗಳನ್ನು ಏರ್ಪಡಿಸಲು ಎಲ್ಲಾ ಸಿದ್ಧತೆಗಳು ನಡೆದಿವೆ. ಕಡಲೆಕಾಯಿ ಎಣ್ಣೆ ಟಿಲೆ ನಿಗದಿ ಬಗ್ಗೆ ಪರ್ಯಾಲೋಚನೆ ನಡೆಯುತ್ತಿದೆ' ಎಂಬುದಾಗಿ ಪ್ರಕಟಣಾಧಿಕಾರಿಗಳು ತಿಳಿಸಿದ್ದಾರೆ. ಈ ಪ್ರಕಟಣೆ 1946 ಡಿ 15 ರ 15 ದಿವಸಗಳಿಗೆ ಸಂಬಂಧಿಸಿದುದು.

—o—

ಬೆಂಗಳೂರು, ಜ 7 — ಇದೇ ತಾರೀಖು 14 ರಲ್ಲಿ ದೆಹಲಿಯಲ್ಲಿ ಸೇರುವ ಮಿನೆರಲ್ ರಿಸರ್ಚ್ ಸಮ್ಮೇಳನದಲ್ಲಿ ಭಾಗವಹಿಸಲು ಶ್ರೀ ಮಂಗಳಂ ಶೇಷಾದ್ರಿಯವರು ನಾಳೆ ಡೆಲ್ಲಿಗೆ ಪ್ರಯಾಣ ಮಾಡುವರು.

o o

ಕಲ್ಕತ್ತಾ, ಜ 7 — ಬ್ರಿಟಿಷರ ಡಿಸೆಂಬರ್ 6 ಹೇಳಿಕೆಯನ್ನು ಕಾಂಗ್ರೆಸ್ ಬಪ್ಪಿದನ್ನು ಕುರಿತು ಶ್ರೀ ಶರತ್‌ಚಂದ್ರ ಬೋಸರು ಮುಸ್ಲಿಂಲೀಗು ರಚನಾ ಸಭೆಯಲ್ಲಿ ಈಗಲೂ ಭಾಗವಹಿಸುವುದಿಲ್ಲವೆಂದು ತಿಳಿಸಿದರು.

ವರ್ತಮಾನ ಸಂಗ್ರಹ

ತಿರುವಾಂಕೂರಿನಲ್ಲಿ ಎರಡು ಭಾರಿ ಗುಂಡು ಹಾರಿಸಲಾಯಿತು

ತ್ರಿವೇಂದ್ರಮ್ ಜ 6 — ತ್ರಿವೇಂದ್ರಂನಲ್ಲಿ ಪೋಲೀಸರು ಎರಡು ಸುತ್ತು ಗುಂಡು ಹಾರಿಸಿದರು. ಒಬ್ಬನು ಸತ್ತನು. ಇಬ್ಬರು ಗಾಯಗೊಂಡರು. ಪ್ರಸಿದ್ಧ ಯಾತ್ರಾಸ್ಥಳ ಸಚ್ಚಿದಾನಂದನಲ್ಲಿ ಈ ಘಟನೆ ಜರುಗಿತು ರಥೋತ್ಸವ ಕಾಲದಲ್ಲಿ ಪೋಲೀಸರನ್ನು ಮತ್ತು ಜನರನ್ನು ದೊಂಬಿಗಾರರ ಗುಂಪು ಕೆಣಕಿ ಕಲ್ಲು ಬಿರಿದ್ದೇ ಈ ಗೋಳಿಬಾರ್‌ಗೆ ಕಾರಣ ದೊಂಬಿಯು ಮೇಲೆ ಗುಂಡುಹಾರಿಸಲು ಜಿಲ್ಲಾಧಿಕಾರಿಗಳು ಅಪ್ಪಣೆಯಿತ್ತರು. ಮಿಲ್ಟ್ರಿ ಸಹಾಯ ಕೋರಲಾಯಿತು. ಈಗ ಪರಿಸ್ಥಿತಿ ಸದಕ್ಕೆ ಬಂದಿದೆ.

ಹರ್ಡೀಕರರ ನಿಧನ

ಅಲಮಟ್ಟಿಯ ಶರಣ ಸಂದೇಶ ವಾರಪತ್ರಿಕೆಯ ಸಂಪಾದಕರಾದ ಶ್ರೀ ಹರ್ಡೀಕರ ಮಂಜಪ್ಪನವರು ತಾ॥ 8 ನೆಯ ದಿನ ಸಂಜೆಯ 5 ಗಂಟೆಗೆ ಕೈಲಾಸವಾಸಿಗಳಾದರೆಂದು ತಿಳಿಸಲು ವಿಷಾದವೆನಿಸುತ್ತದೆ.

ಪೂನಾದಲ್ಲಿ ಕ್ವೀಪ್ರಹಲ್ಲೆ ಅಖಿಲ ಭಾರತ ಮಂತ್ರವಾದಿಗಳ ಸಮ್ಮೇಳನವೊಂದು ನಡೆಯಲಿದೆ ಇಂತಹ ಸಮ್ಮೇಳನವೂ ಇದೇ ಪ್ರಥಮ.

ವಾಷಿಂಗ್‌ಟನ್ನಿನ ಒಬ್ಬ 16 ವರ್ಷದ ಹುಡಗನು ಹೆರ 1250 ಪೌಂಡು ಪಡೆಯಲು ಪ್ರಯತ್ನಿಸಿದನೆಂದು ವಿಚಾರಣೆಗೆ ಒಳಪಡಿಸಲ್ಪಟ್ಟನು. ಕೋತಿ ಮುಖವೆಂದು ತನ್ನನ್ನು ಇತರ ಹುಡಗರು ಕರೆಯಲಾಗಿ ಅದನ್ನು ಪ್ಲಾಸ್ಟಿಲ್ ಚಿಕಿತ್ಸೆ ಮೂಲ್ಕ ಸರಿಪಡಿಸಲು ಈ ಹಣ ಬೇಕಾಗಿದೆಯೆಂದು ತಿಳಿಸಿದನಂತೆ

ಸ್ವಾತಂತ್ರ್ಯ ದಿನಾಚರಣೆಯನ್ನು ಇದೇ ತಾ॥ 26 ರಲ್ಲಿ ಆಚರಿಸಬೇಕೆಂದು ಕಾಂಗ್ರೆಸ್ ಕಾರ್ಯ ಸಮಿತಿ ತೀರ್ಮಾನಿಸಿರುವುದಾಗಿ ದೆಹಲಿ ಸುದ್ದಿ.

ಬೊಂಬಾಯಿ, ಜ 7 — ಯಾವ ಕೋಮು ಗಲಭೆ ನಡೆಸುವದೋ, ಆ ಕೋಮಿನಿಂದ ಮತ್ತೊಂದು ಕೋಮಿಗೆ ಪರಿಹಾರ ಕೊಡಿಸಲು ಬೊಂಬಾಯಿಸರ್ಕಾರ ನಿರ್ಧರಿಸಿದೆ.

.....

ವಾಷಿಂಗ್ಟನ್, ಜ 6 — ಬ್ರಿಟಿಷ ನೂರು ಪೌಂಡು ಸಾಲವನ್ನು ಪುನಃ ಅಮೇರಿಕಾದಿಂದ ಪಡೆಯಿತೆಂದು ವಂದಿಯಾಗಿದೆ.

.....

ವಾಷಿಂಗ್ಟನ್, ಜ 6 — ರಾಜಕೀಯ ಐಕ್ಯತೆಗಾಗಿ ಎಲ್ಲಾ ಪಕ್ಷಗಳೂ ಒಂದಾಗಬೇಕು ಅಣು ರಹಸ್ಯದ ಮೇಲೆ ಅಮೇರಿಕಾ ಅಧಿಕಾರವಿಟ್ಟುಕೊಳ್ಳಲಿಚ್ಚಿಸುವುದಿಲ್ಲ. ಅದು ಯುದ್ಧೋಪಯೋಗವಾಗಕೂಡದೆಂದೇ ನನ್ನ ಆಸೆ ಎಂದು ಅಧ್ಯಕ್ಷ ಟ್ರೂಮನ್ ಅಮೇರಿಕ ಕಾಂಗ್ರೆಸ್ ಅಧ್ಯಕ್ಷ ಭಾಷಣದಲ್ಲಿ ತಿಳಿಸಿದರು.

.....

ಅಮೃತಸರ, ಜ 6 — ಬ್ರಿಟಿಷ್ ಯೋಜನೆಯನ್ನು ಕಾಂಗ್ರೆಸ್ ಮಾನ್ಯ ಮಾಡಿದ್ದು ಪಾಕೀಸ್ಥಾನಕ್ಕೆ ಪುರಸ್ಕಾರವಿತ್ತಂತಾಗಿರುವುದೆಂದು ಸಿಕ್ ನಾಯಕರು ಅಭಿಪ್ರಾಯಪಟ್ಟಿದ್ದಾರೆ

o o

ಅರ್ಜೆಂಟೈನಾದಿಂದ ರಾಮಪುರದ ಮಹಾತ್ಮಾಜಿಯವರ ಗುಡಿಸಲಿಗೆ ಒಂದು ಪತ್ರ ಬಂದಿದೆ. ಅದರಲ್ಲಿ ಮಹಾತ್ಮಾಜಿಯವರಿಗೆ ಸ್ವಾತ್ಯಲಿಕ ಮತ್ತು ಗಾಂಧಿ ಎಂಬ ವ್ಯಂಗಚಿತ್ರವನ್ನು ಕಾಣಿಕೆಯಾಗಿ ಕೊಟ್ಟಿದ್ದು ಗಾಂಧಿಯವರ ಆತ್ಮಚರಿತ್ರೆಯನ್ನು ಬೇಡಲಾಗಿದೆ. ಹೊರತು ಗಾಂಧಿಜಿಯ ವಿಶಾಲ ಕಾರ್ಯದ ಬಗ್ಗೆ ಶುಭ ಕೋರಲಾಗಿದೆ

ಕರಾಚಿಯಲ್ಲಿ ಲೀಗ್ ಕಾರ್ಯ ಸಮಿತಿ ಸಭೆ

ಕರಾಚಿ ಜ — ಅಖಿಲ ಭಾರತ ಮುಸ್ಲಿಂ ಲೀಗಿನ ಅಧ್ಯಕ್ಷ ಶ್ರೀ ಎಂ. ಎ. ಜಿನ್ನಾ ಇತ್ತಿರುವ ಹೇಳಿಕೆಯಲ್ಲಿ ಈ ರೀತಿ ತಿಳಿಸಿದ್ದಾರೆ —

'ಎ. ಐ. ಸಿ. ಸಿ. ನಿರ್ಣಯವನ್ನು ನಾನು ಪತ್ರಿಕೆಗಳಿಂದ ತಿಳಿದೆ. ಜಾಗ್ರತೆಯಾಗಿ ಲೀಗ್ ಕಾರ್ಯ ಸಮಿತಿ ಸೇರುವುದು. ಮತ್ತು ಕರಾಚಿಯಲ್ಲಿ ಸೇರಬಹುದು. ಇದುದರಿಂದ ನಾನು ಏನು ಅಭಿಪ್ರಾಯವನ್ನು ಈಗಲೇ ಕೊಡಲಾರೆ. ಕಾರ್ಯ ಸಮಿತಿಯಲ್ಲಿ ಎಲ್ಲವೂ ಪರಿಶೀಲಿಸಲ್ಪಡುವುದು.

ಪ್ರಕಾಶಂ ಪುತ್ರ ಬ್ರಿಟಿಷ್ ರಿಗೆ ಸತ್ಕಾರ ವಿ

ಲಂಡನ್ ಜ 7 — ಆಂ
ಧಾನಿ ಶ್ರೀ ಪ್ರಕಾಶಂ ಪು
ಹನುಮಂತರಾವು ಲಂ
ತೇಯರು ಮತ್ತು ಬ್ರಿ
32 ಮಂದಿಗೆ ಸತ್ಕಾರ ವಿ

ಭಾರತ ಕೊರ್ಪ್ ಹೇಗ್ ರಾಜಕೀಯ

ಕೋರ್ಪ್ ಹೆಗ್ ಜ 7 — ತಾತ್ಕಾಲಿಕ ಸರ್ಕಾರದ ಪ್ರತಿ
ದ ಶ್ರೀ ಮೆನನ್ ಮತ್ತು ಶ್ರೀ ಆ
ನ್ನು ಡೇನಿಷ್ ವಿದೇಶಾಂಗ ಮ
ಸ್ವಾಗತಿಸಿದರು. ಭಾರತ ಮತ್ತು
ಕೋರ್ಪ್ ಹೇಗ್ ರಾಜಕೀಯದ ಬಾಂ
ಧವ್ಯದ ಒಗ್ಗೆ ಸಂಭಾಷಣೆ ನಡೆಯಿತು.

ಕಾನ್ಪುರದಲ್ಲಿ ಕಾರ್ಮಿಕರ ಧಾಳಿ

ಕಾನ್ಪುರ ಜ 7 — ನಿನ್ನೆಯ ದಿವಸ ಕೆಲವು ನೂರು ಮಂದಿ ಸೆಂಟ್ರಲ್ ಆರ್ಡೆನ್ಸ್ ಡಿಪೋ ಕಾರ್ಮಿಕರು ಮ್ಯಾಂಡೆಂಟ್ ಆಫೀಸನ್ನು ಧಾಳಿ ಗಿಡು ಮಾಡಿ ತಮ್ಮ ಮುಖಂಡರ ಬಿಡುಗಡೆಗಾಗಿ ಕೂಗು ಹಾಕಿದರು. ಗುಂಡು ಹಾರಿಸಲಾಗಿ ಒಬ್ಬ ಹೆಂಗಸು 4 ಗಂಡಸು ಸತ್ತರು 24 ಗಂಟೆ ಕರ್ಫ್ಯೂ ಜಾರಿಯಾಗಿದೆ

ಭಾರತದಿಂದ ತೊಲಗಿ ಎಂಬುದನ ಪ್ರತಿಜ್ಞೆಯಿಂದ ತೆಗೆದರು

ಎ ಐ. ಸಿ. ಸಿ. ದೆಹಲಿಯಲ್ಲಿ ಪಟೆಲರ ಮನೆಯಲ್ಲಿ ನಿನ್ನೆ ಒಂದು ಗಂ ನಡೆಯಿತು.

ಸ್ವಾತಂತ್ರ ಪ್ರತಿಜ್ಞೆ ನಿರ್ಣಯಕ್ಕೆ ದ್ದುಪಡಿ ಸೂಚಿಸಲ್ಪಟ್ಟ 'ಕ್ವಿಟ್ ಇಂಡಿಯ' ಪದ ಕೂಡದೆಂದು ತೀರ್ಮಾನಿಯಿತು. ಸ್ವಾತಂತ್ರ ದಿನದಲ್ಲಿ ಸಭಾಷಣ! ಮೆರವಣಿಗೆ ಬೇಡ; ಆರಚನಾತ್ಮಕವಾಗಿರಬೇಕೆಂಬುದೇ ಪಡಿ

ಖಾದಿ

ಖಾದಿಯೇ ಖಾದಿಯು !
ಖಾದಿ ಸ್ವರ್ಗದಹಾದಿಯು ॥
ಖಾದಿಯೇ ಒಡವರ
ಹಾದಿ ರಾಜಬೀದಿಯು
ಭಾರತದ ಒಡಜನರ
ಒಡಲ ತುಂಬಿಸುವ ಖಾದಿ ॥೧॥
ಖಾದಿ ಎಲ್ಲರನ್ನು ಒಂದು ಗೂಡಿಸು
ವ ಹಾದಿ
ಖಾದಿ ದೊರಕುವದು
ಸ್ವಾತಂತ್ರ್ಯದ ಮೂಲಮಂತ್ರವು
ಖಾದಿ ॥ ೨ ॥
ಬಡವರಿಗೆ ಬಲ್ಲಿದವ
ಜಿಲ್ಲರಿಗೆ ಸರಿಯಾಗಿ
ಕಾಣುತಿದೆ ನವೀಗೆ
ಕೈ ನೂಲಿನ ಮೇಲು ಒಟ್ಟಿಯು
ಖಾದಿ ॥ ೩ ॥
ಜನರಿಗೆ ಕೆಲಸವನ್ನು
ತಲಿ ನಿರುತದಲಿ
ಸೇವೆ
ನುಂಡೊರೆಯು ನೂಡ
ಖಾದಿ ॥ ೪ ॥

ಸ್ಪೇರ್ಶ ಮಾಸ್ತರಿಗೆ ದಂಡ

ಭಾರವಾಡದಲ್ಲಿಯು ಅಸಿಸ್ಟಂಟ ಸ್ಪೇರ್ಶ ಮಾಸ್ತರರಾದ ಶ್ರೀ ವೆಂಕೋಬರಾಯರಿಗೆ ಲಂಚ ತಿಂದ ಬಗ್ಗೆ ಖಟ್ಲೆ ನಡೆದು ೫೧೦ ರೂ. ದಂಡ ವಿಧಿಸಲಾಯ್ತು.

ಜಾಮೀನ ಬೇಡಿದರು

ಮುಂಬಯಿಯಲ್ಲಿ ಹೊರಡುತ್ತಿರುವ ಇಂಗ್ಲೀಷ ವಾರ ಪತ್ರಿಕಯಾದ 'ಸ್ಟಾರದ ಸಂಪಾದಕರಾದ ಮಿ. ಅಜಿಜ್ ಬೇಕ್ ಇವರ ಕಡಿಂದಾ ಮುಂಬಾಯಿ ಸರಕಾರದವರು ೩೦೦೦ ರೂ. ಯ ಜಾಮೀನ್ನು ಬೇಡಿದ್ದಾರೆ.

ಗುಪ್ತ ಪೋಲೀಸರ ಕಣ್ಣು

ಅಮದಾಬಾದದಲ್ಲಿ ಗುಪ್ತ ಪೋಲೀಸಖಾತೆಯ ವಿಶೇಷ ಪೋಲೀಸರು ಸರದಾರ ವಲ್ಲಭಭಾಯಿ ಪಟೇಲರ ಕಾರ್ಯಕ್ರಮವನ್ನು ಕಣ್ಣಲ್ಲಿ ಎಣ್ಣೆ ಹಾಕಿ ನಿರೀಕ್ಷಿಸುತ್ತಿದ್ದಾರೆಂದೂ ಮತ್ತು ಸರದಾರರ ಭಾಷಣ ಹಾಗು ಸಂಭಾಷಣೆಗಳ ರಿಪೋರ್ಟು ಮಾಡಿಕೊಳ್ಳುತ್ತಿದ್ದರೆಂದು ತಿಳಿಯುತ್ತದೆ.



ರಸ್ತೆ ನಿರ್ಮಿಸಲು ನೂತನ ಯಂತ್ರ

ಸುಖ ಆರೋಗ್ಯ ಆನಂದದಾಯಕ



ಜೀವಿತಕ್ಕೆ

ಸ್ಟೀಮರ್ ಮಾರ್ಕಿನ ಉತ್ಕೃಷ್ಟ ಹಿಂಗಿನ ಪುಡಿ ಉಪಯೋಗಿಸಿ.

ಈ ಹಿಂಗಿನ ಪುಡಿಯು ಅತ್ಯಂತ ಪರಿಶುದ್ಧವಾದುದು. ನೀರನ್ನು ಸೇರಿಸದೇ ತಯಾರಿಸಲ್ಪಟ್ಟಿದೆ. ಅತಿ ಘನವಾದ ಗುಣವುಳ್ಳದ್ದು. ಎಲ್ಲಾ ಸನಾತನ ಸಂಸಾರಗಳಲ್ಲಿ ಉಪಯೋಗಿಸಲು ಅರ್ಹವಾದುದು. ಒಂದು ಚಿಕ್ಕ ಚಿಟಿಕೆಯಷ್ಟನ್ನು ತಯಾರಿಸುತ್ತಿರುವ ಆಹಾರ ಪದಾರ್ಥಗಳಲ್ಲಿ ಹಾಕಿದಲ್ಲಿ ದೀರ್ಘವಾದ, ಸುಮನೋಹರವಾದ ವಾಸನೆಯನ್ನು ಕಲ್ಪಿಸುವುದಲ್ಲದೆ, ಹೆಚ್ಚು ರುಚಿಯನ್ನುಂಟು ಮಾಡುತ್ತದೆ. ಎಲ್ಲಾ ಶರೀರ ವ್ಯಾಧಿಗಳಿಗೂ ಒಂದು ಸಂಪೂರ್ಣ ಔಷಧದಂತಿದೆ. ಒಂದು ಸಾರಿ ಉಪಯೋಗಿಸಿದ್ದಲ್ಲಿ ನಂಬಿಕೆಯುನ್ನುಂಟು ಮಾಡುವುದಲ್ಲದೆ, ಸದಾ ಅದನ್ನು ಉಪಯೋಗಿಸುವಂತೆ ಮನಗೊಳಿಸುವುದು. ಎಲ್ಲಾ ಪ್ರಮುಖ ವ್ಯಾಪಾರಿಗಳಲ್ಲೂ ಒಂದು, ಅರ್ಧ, ಕಾಲು ಪೌಂಡು ಮತ್ತು ಒಂದು ಪಲಂ ಪ್ಯಾಕೆಟ್ಟುಗಳಲ್ಲಿ ದೊರೆಯುತ್ತದೆ. ಬೆಲೆ ಒಂದು ಪೌಂಡಿಗೆ ರೂ. 3-8-0 ಮಾತ್ರ.

ನಮ್ಮ ಸುಘಂದ ಅಡಿಕೆಪುಡಿ ಒಂದು ವೈಶಿಷ್ಟ್ಯ.

ನಮ್ಮ ಶ್ರೀ ಓಂ ಗುರುತಿನ ಕೇಸರಿ ಅತ್ಯಂತ ಪರಿಶುದ್ಧವಾದ ಖಾತರಿಯಾದುದು. ವಿವರಗಳಿಗೆ ಮತ್ತು ಸ್ಯಾಂಪಲಿಗೆ ಬರೆಯಿರಿ —

ವಲ್ಲಭದಾಸ್ ತೇಜ್‌ಪಾಲ್,

(ಹಿಂಗು, ಕೇಸರಿ ಮತ್ತು ಕಿರಾಣ ವ್ಯಾಪಾರಿಗಳು)

೧೪. ಗೋವಿಂದಪ್ಪ ನಾಯಕ್ಕರಸ್ತೆ, ಜಿ. ಟಿ. ಮದರಾಸು.

At Opera — From 4–1–47

THE GREAT MAGICIAN

Bela Lagosi — Maria Alba — Lucian Preibal

At Ranjit____ From 3–I–47

CARAVAN

ಅರೂಣ್ — ಕಮಲಾ ಚಟರ್ಜಿ — ಪಾತ್ರವಹಿಸಿರುವ

ಕಾರವಾನ್

Edited, Printed and Published by M. S Krishna Rao at the Satyavadi Press ChamarajAgrahar, Mysore.

For Quality Printing

L. N. Press

Sriramp et, MYSO